ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **06.12.2023**

ಪಾಟಿ ಸವಾಲುಃ ಶ್ರೀ ಪಿ ಕೆ ಜಿ ವಕೀಲರಿಂದ

ನಾನು ಗುಮ್ಮನಕೊಲ್ಲಿಯಲ್ಲಿ ವಾಸವಿದ್ದು ನನ್ನ ತಾಯಿ ಗಂಗಮ್ಮ ಪ್ರಸ್ತುತ ನನ್ನ ಬಳಿ ವಾಸವಿದ್ದಾರೆ. ದಾವಾ ಸೊತ್ತಿನಲ್ಲಿ ಪ್ರತಿವಾದಿಗಳು ವಾಸವಿದ್ದಾರೆ. ಪ್ರತಿವಾದಿಗಳು ವಾಸ ಮಾಡುವ ಮನೆ ಯಾವ ದಾವಾ ಸೊತ್ತಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಸೊತ್ತುಗಳು ಪ್ರತಿವಾದಿಗಳ ಹೆಸರಿನಲ್ಲಿಯೇ ಇದೆ ಎಂದರೆ ಸರಿ . ನಿಪಿ 1 ಪ್ರಕಾರ ಸರ್ವೆ ನಂ 18/1 ರಲ್ಲಿ 7 ಏಕರೆ 56 ಸೆಂಟ್ ತರಿ ಜಮೀನು ಮತ್ತು 65 ಸೆಂಟ್ ಜಾಗದಲ್ಲಿ ಹೊಲವನ್ನು ಖರೀದಿಸಿದ್ದು ದಾವಾ ಎ ಸೊತ್ತಿನಲ್ಲಿ ಒಟ್ಟು 4 ಏಕರೆ 78 ಸೆಂಟ್ ಜಾಗ ಮಾತ್ರ ತೋರಿಸಿದ್ದು ಉಳಿದ ಜಾಗ ಏನಾಯಿತು ಎಂದು ನನಗೆ ಗೊತ್ತಿಲ್ಲ. ದಾವಾ ಎ ಸೊತ್ತಿನಲ್ಲಿ ಸರ್ವೆ ನಂ 18/1 ಮತ್ತು 18/9 ಏಕೆ ವಿಗಂಡಣೆ ಆಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಬಿ ಸೊತ್ತಿನಲ್ಲಿ ಸರ್ವೆ ನಂ 20/3 ಪಿ 1 ಮತ್ತು 20/3 ಪಿ 2 ಹೇಗೆ ವಿಂಗಡಣೆಯಾಗಿದೆ ಹಾಗೂ ಯಾವಾಗ ವಿಂಗಡಣೆಯಾಗಿದೆ ಎಂದು ನನಗೆ ಗೊತ್ತಿಲ್ಲ.

ನನ್ನ ಅಜ್ಜ ಬಿದ್ದಪ್ಪನಿಗೆ ಇಬ್ಬರೂ ಹೆಂಡತಿಯವರು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಅವರಿಗೆ ಇಬ್ಬರು ಹೆಂಡತಿಯರು ಇದ್ದು ಮೊದಲನೇ ಹೆಂಡತಿ ದೇವಮ್ಮ ಮತ್ತು 2 ನೇ ಹೆಂಡತಿ ಚೆನ್ನಮ್ಮ ಎಂದರೆ ಸರಿಯಲ್ಲ. ಚೆನ್ನಮ್ಮನವರಿಗೆ ಮಕ್ಕಳಿರಲಿಲ್ಲ ಎಂದರೆ ಸರಿಯಲ್ಲ. ದೇವಮ್ಮನವರಿಗೆ ನಮ್ಮ ತಂದೆ ಒಬ್ಬರೆ ಮಗ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ಚೆನ್ನಮ್ಮನವರಿಗೆ ಇಬ್ಬರು ಮಕ್ಕಳಿದ್ದು ದೇವಮ್ಮ ಮತ್ತು ಲವಪ್ಪ ಎನ್ನುವರು . ನಮ್ಮ ತಂದೆ ಲವಪ್ಪನವರಿಗೆ 9 ಜನ ಮಕ್ಕಳಿದ್ದು ಅವರಲ್ಲಿ 7 ಜನ ಹೆಣ್ಣು ಮಕ್ಕಳು ಮತ್ತು 2 ಗಂಡು ಮಕ್ಕಳಾಗಿರುತ್ತಾರೆ . ಇಬ್ಬರೂ ಗಂಡು ಮಕ್ಕಳ ಪೈಕಿ ಮೋಹನ ರಾಜ್ ಒಂದನೇ ಪ್ರತಿವಾದಿಯ ಗಂಡನಾಗಿದ್ದು ಅವರು ಮೃತ ಪಟ್ಟಿರುತ್ತಾರೆ . 2 ನೇ ಪ್ರತಿವಾದಿ ಸದರಿ ಮೋಹನರಾಜ್ ರವರ ಮಗಳ ಎಂದರೆ ಸರಿ . ನನ್ನ ಮತ್ತೊಬ್ಬ ಸಹೋದರ ಭಾನುಪ್ರಕಾಶ್ ಅವಿವಾಹಿತನಾಗಿ ಮೃತ ಪಟ್ಟಿರುತ್ತಾರೆ. ನನ್ನ ಹೆಸರು ರಾಣಿಯಾಗಿದ್ದು ನಿಲಾಂಬಿಕ ಎಂದು

ಕೂಡ ಕರೆಯುತ್ತಾರೆ. ಲೋಲಾಕ್ಷಿ ನನ್ನ ತಂಗಿಯಾಗಿದ್ದು ಆಕೆಯ ಮತ್ತೊಂದು ಹೆಸರು ಶೀಲ ಆಗಿರುತ್ತದೆ . ನನ್ನ ಅಣ್ಣ ಮೋಹನ್ ರಾಜ್‌ಗೆ ಸುಮಲ್ ಎಂಬ ಮಗ ಇದ್ದು ಆತನು ಸಹ ಅವಿವಾಹಿತನಾಗಿ ಮೃತಪಟ್ಟಿರುತ್ತಾನೆ . ಸರ್ವೆ ನಂ 18/1 ಮತ್ತು 20/3 ಪಿ 2 ಚಿನ್ನಮ್ಮನವರಿಗೆ ಮಕ್ಕಳಿಲ್ಲದ ಕಾರಣ ನಮ್ಮ ಅಜ್ಜ ಅವರ ಹೆಸರಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ರಂಗಸಮುದ್ರ ಗ್ರಾಮದಲ್ಲಿ ಗುಲಾಬ್‌ಸಿಂಗ್ ರವರ ಮಕ್ಕಳಾದ ಇಂದ್ರಸಿಂಗ್ ಮತ್ತು ಚೈನ್ ಸಿಂಗ್ ರವರ ಪರಿಚಯವಿದೆ . ನಮ್ಮ ತಂದೆ ಲವಪ್ಪನವರು ಸರ್ವೆ ನಂ 20/3 ರಲ್ಲಿ 85.50 ಜಾಗವನ್ನು ಗುಲಾಬ್ ಸಿಂಗ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಬೋಗ್ಯಕ್ಕಾಗಿ ನೀಡಿದ್ದು ಅದನ್ನು ಅವರು ಕ್ರಯಪತ್ರವಾಗಿ ಮಾಡಿಕೊಂಡಿದ್ದು ನಂತರ ಪ್ರಕರಣ ದಾಖಲಿಸಿ ಸದರಿ ಜಮೀನನ್ನು ನಮ್ಮ ತಾಯಿ ವಾಪಾಸ್ಸು ಪಡೆದುಕೊಂಡಿರುತ್ತಾರೆ. ಸಾಕ್ಷಿ ಮುಂದುವರಿದು ಸದರಿ ಪ್ರಕರಣವನ್ನು ನನ್ನ ಅಣ್ಣನ ಹೆಸರಿನಲ್ಲಿ ಮಾಡಿ ಅವರಿಗೆ ದುಡ್ಡನ್ನು ನೀಡಿ ವಾಪಾಸ್ಸು ಪಡೆಯಲಾಗಿದೆ. ನನ್ನ ಅಣ್ಣ ರಾಮ ಬಸ್‌ನಲ್ಲಿ ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣ 1981 ರಿಂದ 1986 ರವರೆಗೆ ಬಸ್ ನಿರ್ವಾಹಕರಾಗಿ ಕೆಲಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಸರ್ವೆ ನಂ 18/1 ಜಾಗವನ್ನು ಇಂದ್ರಸಿಂಗ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಾಗವನ್ನು ಮಾರಾಟ ಮಾಡಿದ್ದರೂ ಸ್ವಾಧೀನ ಕೊಡದ ಕಾರಣ ಇಂದ್ರಸಿಂಗ್ ರವರು ನಮ್ಮ ತಂದೆಯ ವಿರುದ್ಧ ಸದರಿ ಸ್ವತ್ತಿನ ಸ್ವಾಧೀನ ಕೋರಿ ಮಡಿಕೇರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಮುಂದೆ ಒ ಎಸ್ ನಂ 12/1983 ರಂತೆ ಪ್ರಕರಣ ದಾಖಲಿಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಇಂದ್ರಸಿಂಗ್ ರವರಿಗೆ ನನ್ನ ಅಣ್ಣ ಮೋಹನ್ ರಾಜ್ ಹಣ ನೀಡಿ ಪ್ರಕರಣ ರಾಜಿ ಮಾಡಿಕೊಂಡು ಸರ್ವೆ ನಂ 20/3 ರ 85.50 ಸೆಂಟ್ ಮತ್ತು ಸರ್ವೆ ನಂ 18/9 ರ 2.30 ಸೆಂಟ್ ಜಮೀನುಗಳನ್ನು ವಾಪಾಸ್ಸು ಪಡೆದುಕೊಂಡರು ಎಂದರೆ ಸರಿಯಲ್ಲ. ಸದರಿ ಪ್ರಕರಣ ನಡೆದಾಗ ನನ್ನ ತಂದೆ ಜೀವಂತವಾಗಿದ್ದರು ಎಂದರೆ ಸರಿ . ನಮ್ಮ ಅಣ್ಣನೇ ಸದರಿ ಜಮೀನುಗಳನ್ನು ಬಿಡಿಸಿ ಕೊಂಡ ಕಾರಣ ಅವರ ಹೆಸರಿಗೆ ನೊಂದಾಯಿಸಲಾಯಿತು ಎಂದರೆ ಸರಿಯಲ್ಲ. ಹಾಗಾಗಿ ಸದರಿ ಸ್ವತ್ತುಗಳು ನಮ್ಮ ಅಣ್ಣ ಮೋಹನ್ ರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ.

ನನ್ನ ಅಜ್ಜ ನನ್ನ ಅಜ್ಜಿ ಚಿನ್ನಮ್ಮನಿಗೆ ಮಕ್ಕಳಿಲ್ಲ ಎಂದು ಜಮೀನನ್ನು ನೀಡಿದ್ದು ಅವರ ವಿರುದ್ಧ ಡಬ್ಲು ಕೆ ಸೋಮಯ್ಯ ಎನ್ನುವವರು ತಾನು ಗೇಣಿದಾರನೆಂದು ಘೋಷಿಸಬೇಕು ಎಂದು ಪ್ರಕರಣ ದಾಖಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಪ್ರಕರಣ ಇತ್ಯಾರ್ಥ ಗೊಳ್ಳುವ ಮೊದಲೇ ನಮ್ಮ ಅಜ್ಜಿ ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಜ್ಜಿ ಮೃತಪಟ್ಟ ನಂತರ ನನ್ನ ಮೋಹನ್ ರಾಜ್ ಸದರಿ ಪ್ರಕರಣದಲ್ಲಿ ಪಕ್ಷಗಾರಾಗಿ ಸೇರ್ಪಡೆ ಗೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ದಾವಾ ಸೊತ್ತು ಸರ್ವೆ ನಂ 18/1 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ವಜಾ ಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜಿಗೆ ನನ್ನ ಅಜ್ಜ ಸದರಿ ಸ್ವತ್ತನ್ನು ನೀಡಿದ ಕಾರಣ ಅದು ಅವರ ಸ್ವಯಾರ್ಜಿತ ಸ್ವತ್ತು ಆಗುತ್ತದೆ ಎಂದರೆ ಸರಿಯಲ್ಲ.

ನಿಪಿ 12 ರಲ್ಲಿ ಕಾಣಿಸುವ ಗೌರಿಶೆಟ್ಟಿ ಮತ್ತು ವೆಂಕಟರಮಣಶೆಟ್ಟಿ ಯಾರು ಎಂದು ನನಗೆ ಗೊತ್ತಿಲ್ಲ. ಸದರಿಯವರಿಗೆ ನನ್ನ ಅಜ್ಜ ದಿನಾಂಕ 10-04-1955 ರಲ್ಲಿ ಸರ್ವೆ ನಂ 18/1 ರಲ್ಲಿ 7 ಏಕರೆ 56 ಸೆಂಟ್ ಪೈಕಿ 4 ಏಕರೆ 78 ಸೆಂಟ್ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 1 ಸರ್ವೆ ನಂ 18/1 ರಲ್ಲಿ ಕಾಣಿಸುವ ಉಳಿಕೆ ಜಾಗ ಇದಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಾಗವನ್ನು ವೆಂಕಟರಮಣ ಶೆಟ್ಟಿರವರು ದೇವಪ್ಪನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟಿ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.